Language and Literacy

# Reading for pleasure

# ಆನಂದಕ್ಕಾಗಿ ಓದು





Teacher Education through School-based Support in India
www.TESS-India.edu.in

http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹಾದಾಸೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿ ಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ಸಹಾಯ ಹಸ್ತ ನೀಡುವುದೇ ಟೆಸ್ ಇಂಡಿಯಾ -OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು ಗಳಂದು ಪರಿಗಣಿಸಿ ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ 'ವಿದ್ಯಾರ್ಥಿ' ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್ ಇಂಡಿಯಾ OERನಲ್ಲಿನ ಮಾದರಿಯಂತೆ ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್ ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು - ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

### **ವೀಡಿಯೋ ಸಂಪನ್ಮೂಲಗಳು**

ಟೆಸ್ ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0 LL06TESSKNV1*
*Karnataka*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದಲ್ಲೇನಿದೆ

ಈ ಘಟಕವು ವಿದ್ಯಾರ್ಥಿಗಳ ಓದುವ ಉತ್ಸಾಹವನ್ನು ಬೆಳೆಸುವಲ್ಲಿ ನಿಮ್ಮ ಪಾತ್ರದ ಕಡೆ ಗಮನಹರಿಸುತ್ತದೆ. ವಿದ್ಯಾರ್ಥಿಗಳು ಓದುವಿಕೆಯನ್ನು ಹೆಚ್ಚು ಆನಂದಿಸಿವುದರಿಂದ ಹೆಚ್ಚು ಓದಲು ಬಯಸುತ್ತಾರೆ. ಅವರಿಗೆ ಓದಲು ಹೆಚ್ಚು ಅವಕಾಶಗಳಿದ್ದಷ್ಟೂ ಹೆಚ್ಚಿನ ಸಾಮರ್ಥ್ಯ ಗಳಿಸುತ್ತಾರೆ. ಇದೊಂದು ಸಚರಿತ ಚಕ್ರವಾಗುತ್ತದೆ.

ಓದುವ ಶಿಕ್ಷಕ ಮತ್ತು ಬೋಧಿಸುವ ಓದುಗರಾಗಿ, ವಿದ್ಯಾರ್ಥಿಗಳಿಗೆ ನೀವೇ ಪ್ರಮುಖ ಮಾದರಿ ವ್ಯಕ್ತಿ. ಓದುವಿಕೆಯಲ್ಲಿ ಅಪರಿಮಿತ ಆನಂದ ಪಡೆಯಲು ನಿಮ್ಮ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಬಲ್ಲಿರಿ.

ಈ ಘಟಕದಲ್ಲಿ, ಓದುವಿಕೆಯ ಕಡೆಗೆ ಧನಾತ್ಮಕ ಮನೋಭಾವವನ್ನು ನಿಮ್ಮ ವಿದ್ಯಾರ್ಥಿಗಳಲ್ಲಿ ಬೆಳೆಸುವ ತರಗತಿ ಅಭ್ಯಾಸಗಳನ್ನು ನಿಮಗೆ ಪರಿಚಯಿಸಲಾಗುವುದು. ಹಾಗಾಗಿ ವಿದ್ಯಾರ್ಥಿಗಳು ಓದಲು 'ಮನಸ್ಸು' ಮತ್ತು 'ಕೌಶಲ' ಎರಡನ್ನೂ ಹೊಂದುತ್ತಾರೆ.

# ಈ ಘಟಕದಲ್ಲಿ ನೀವೇನು ಕಲಿಯಬಹುದು?

- ನಿಮ್ಮ ವಿದ್ಯಾರ್ಥಿಗಳ ಓದಿಗೆ ಮಾದರಿಯಾಗುವ ಬಗೆ
- ನಿಮ್ಮ ವಿದ್ಯಾರ್ಥಿಗಳಲ್ಲಿ ಓದುವ ಆನಂದವನ್ನು ಬೆಳೆಸುವ ಚಟುವಟಿಕೆಗಳನ್ನು ಯೋಜಿಸುವ ರೀತಿ
- ಸಹಪಾಠಿ ಸಹಾಯ ಮತ್ತು ಸಹಭಾಗಿತ್ವದ ಕಲಿಕೆಗಾಗಿ ಜೋಡಿ ಓದನ್ನು ಸಂಘಟಿಸುವುದು

# ಈ ಮಾರ್ಗ ಏಕೆ ಮುಖ್ಯ?

ಓದುಗಳಾ/ನಾಗುವುದರಿಂದ ಆನೇಕ ಫಾಯಿದೆಗಳಿವೆ. ಓದುವಿಕೆ ಚಿಂತನೆಯನ್ನು ಪ್ರಚೋದಿಸುತ್ತದೆ. ಇದು ಜ್ಞಾನ, ಅರಿವು ಮತ್ತು ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಓದುವುದರಿಂದ ಆಲಿಸುವಿಕೆ ಮತ್ತು ಮಾತನಾಡುವಿಕೆ ಕೌಶಲಗಳು ಉತ್ತಮವಾಗುವುದಲ್ಲದೆ, ಬರೆಯುವ ಸಾಮರ್ಥ್ಯದ ಮೇಲೆ ಒಳ್ಳೆಯ ಪ್ರಭಾವವಿರುತ್ತದೆ. ನಿರರ್ಗಳವಾಗಿ ಓದಲು ಕಲಿಯದ ವಿದ್ಯಾರ್ಥಿಗಳು, ಅವರಿಗೆ ಸಿಗುವ ಕಲಿಕಾ ಅವಕಾಶಗಳಲ್ಲಿ ತೊಡಗಿಕೊಳ್ಳಲು ಪ್ರಯಾಸಪಡುತ್ತಾರೆ ಹಾಗೂ ವರುಗಳು ಹಿಂದುಳಿಯುವ ಅಪಾಯವಿರುತ್ತದೆ.

ಒಂದು ನಿರ್ದಿಷ್ಟ ಚಟುವಟಿಕೆಯನ್ನು ನಾವು ಆನಂದಿಸಿದರೆ, ಅದನ್ನು ಮತ್ತೆ ಮತ್ತೆ ಮಾಡಲು ಹೆಚ್ಚು ಅವಕಾಶಗಳನ್ನು ಹುಡುಕಿಕೊಳ್ಳುತ್ತೇವೆ. ಆ ಟುವಟಿಕೆಯಲ್ಲಿ ನಾವು ಹೆಚ್ಚುತೊಡಗಿಕೊಂಡಷ್ಟೂ, ಅದರಲ್ಲಿ ಉತ್ತಮರಾಗುತ್ತೇವೆ. ಇತರ ಕೌಶಲಗಳಂತೆ, ಓದುವಿಕೆಗೂ ಇದು ಅನ್ವಯಿಸುತ್ತದೆ. ಓದನ್ನು ಅನುಭವಿಸಿ ಸಂತೋಷ ಪಡೆಯುವ ಅವಕಾಶಗಳನ್ನು ನಿಮ್ಮ ವಿದ್ಯಾರ್ಥಿಗಳಿಗೆ ಒದಗಿಸುವುದರ ಮೂಲಕ, ಅವರು ಆತ್ಮವಿಶ್ವಾಸದಿಂದ ಓದಿ, ಆಜೀವ ಓದುಗರಾಗವಂತೆ ಮಾಡಬಹುದು.

# 1 ಓದಿಗೆ ಮಾದರಿ ವ್ಯಕ್ತಿಯಾಗುವುದು

ವಿದ್ಯಾರ್ಥಿಗಳ ಓದುವ ಮನೋಭಾವ ಅವರ ಶಿಕ್ಷಕರಿಂದ ಬಲವಾಗಿ ಪ್ರಭಾವಿಸಲ್ಪಡುತ್ತದೆ. ವೈವಿಧ್ಯ ಪಠ್ಯಗಳ ಓದುವಿಕೆಯಲ್ಲಿ ಸಿಗುವ ಸಂತೋಷವನ್ನು ವಿದ್ಯಾರ್ಥಿಗಳಿಗೆ ಮಾದರಿಯಾಗಿ ತೋರಿಸುವ ಹಲವು ವಿಧಾನಗಳನ್ನು ಈ ಘಟಕದಲ್ಲಿ ನೋಡಬಹುದು.

ವಿದ್ಯಾರ್ಥಿಗಳಿಗೆ ಓದಿನ. ಖುಷಿಯನ್ನು ಪರಿಚಯಿಸುವ ಒಂದು ವಿಧಾನವನ್ನು ಕಂಡುಕೊಂಡ ಬಬ್ಬ ಶಿಕ್ಷಕರ ಪ್ರಸಂಗ ಅಧ್ಯಯನವನ್ನು ಓದುವ ಮೂಲಕ ನೀವು ಇದನ್ನು ಆರಂಭಿಸಲಿದ್ದೀರಿ.

## ಪ್ರಸಂಗ ಅಧ್ಯಯನ 1: ವಾರ್ತಾಪತ್ರಿಕೆ ಓದುವಿಕೆ

ರೇಷ್ಮಾಬಾನು 3 ರಿಂದ 5 ನೇ ತರಗತಿಯ ಮಕ್ಕಳಿರುವ ಬಹುವರ್ಗ ತರಗತಿಯ ದೊಡ್ಡ ಗುಂಪಿನ ವಿದ್ಯಾರ್ಥಿಗಳಿಗೆ ಬೋಧಿಸುತ್ತಾರೆ. ಇಲ್ಲಿ ಅವರು ತಮ್ಮ ತರಗತಿಯಲ್ಲಿ 'ಮನಸ್ಸಿಗೆ ಮುದ ನೀಡುವ ಓದಿಗಾಗಿ ಸುದ್ಧಿಪತ್ರಿಕೆ ಉಪಯೋಗಿಸಿದ ರೀತಿಯನ್ನು ವಿವರಿಸಿದ್ದಾರೆ.

ದುರದೃಷ್ಟವಶಾತ್, ಕೌಟುಂಬಿಕ ಜವಾಬ್ದಾರಿಗಳು ಮತ್ತು ಔದ್ಯೋಗಿಕ ಕಾರಣಗಳಿಂದಾಗಿ ನನಗಿಷ್ಟವಾದಷ್ಟು ಓದಲು ನನಗೆ ಸಮಯವಿಲ್ಲ. ಹಾಗಿದ್ದರೂ, ಓದುವಿಕೆಯ ಸಂತೋಷ ಮತ್ತು ಮೌಲ್ಯವನ್ನು ನನ್ನ ವಿದ್ಯಾರ್ಥಿಗಳು ಮೆಚ್ಚುವಂತೆ ಮಾಡುವುದು ಬಹಳ ಮುಖ್ಯ ಎಂದು ನನ್ನ ಭಾವನೆ.

ಈ ವರ್ಷದ ಆರಂಭಿಕ ದಿನಗಳ ಒಂದು ಬೆಳಗ್ಗೆ, ನಾನು ದಿನಪತ್ರಿಕೆ (ಪ್ರಜಾವಾಣಿ, 2015) ಯಲ್ಲಿ ಒಂದು ಲೇಖನವನ್ನು ಓದುತ್ತಿದ್ದಾಗ, ನನ್ನ ವಿದ್ಯಾರ್ಥಿಗಳು ತರಗತಿಗೆ ಬಂದರು. ಅವರು ಕುಳಿತುಕೊಂಡಾಗ, ನಾನು ಪತ್ರಿಕೆಯನ್ನು ಕೆಳಗಿಟ್ಟು, ಹೀಗೆ ಹೇಳಿದೆ, "ಈಗಷ್ಟೇ ನಾನು ಅತ್ಯಂತ ಆಸಕ್ತಿದಾಯಕವಾದ ಅಂಶವನ್ನು ಓದುತ್ತಿದ್ದೆ! ಅದು 'ನಮ್ಮ ಜಾಂಬೋರೇಟ್'-ಸ್ಕೌಟ್ ಮತ್ತು ಗೈಡ್ ಗಳ ರಾಜ್ಯಮಟ್ಟದ ಉತ್ಸವ!'

ಮಕ್ಕಳು ಸಾಹಸಕ್ರೀಡೆಪ್ರದರ್ಶನ, ಪುಸ್ತಕ ಓದು-ಹುಡುಕಾಟದಲ್ಲಿ ಮಗ್ನರಾಗಿರುವ ಕೆಲವು ಚಿತ್ರಗಳನ್ನು ಅವರಿಗೆ ತೋರಿಸುತ್ತಾ, ನನ್ನ ಮಾತನ್ನು ಮುಂದುವರಿಸಿದೆ: ' ಮಕ್ಕಳ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯವನ್ನು ಬಲಗೊಳಿಸಲು ಇಂಥ ಸಾಹಸ ಕ್ರೀಡೆಗಳ ಕುರಿತು ಜಾಗೃತಿ ಮೂಡಿಸಲು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದೊಡ್ಡಬಳ್ಳಾಪುರದಲ್ಲಿ ಜಾಂಬೋರೇಟ್ ಆಯೋಜಿಸಿತ್ತು, ಅದರಲ್ಲಿ ರಾಜ್ಯದ 33 ಜಿಲ್ಲೆಗಳಿಂದ ನಾಲ್ಕೂವರೆ ಸಾವಿರ ಪುಟಾಣಿಗಳು ಭಾಗವಹಿಸಿದ್ದರು'. ಈ ಸುದ್ದಿ ನನ್ನ ವಿದ್ಯಾರ್ಥಿಗಳನ್ನು ಆಕರ್ಷಿಸಿತು.

ವಾರ್ತಾಪತ್ರಿಕೆಯಲ್ಲಿ ಈ ರೀತಿಯ ಹಲವಾರು ಆಸಕ್ತಿದಾಯಕ ಅಂಶಗಳು ಇರುತ್ತವೆ ಎಂಬುದನ್ನು ವಿವರಿಸಿದೆ. ಶಾಲೆಯ ಹೊರಗೆ ವಾರ್ತಾ ಪತ್ರಿಕೆ ಗಮನಿಸಿದ್ದೀರಾ ಎಂದು ವಿದ್ಯಾರ್ಥಿಗಳನ್ನು ಕೇಳಿದೆ. ಒಂದಿಬ್ಬರು ವಿದ್ಯಾರ್ಥಿಗಳು ಸ್ಥಳೀಯ ಅಂಗಡಿಯಲ್ಲಿ ದಪ್ಪ ದಪ್ಪ ತಲೆಬರಹ ಇರುವ ಪತ್ರಿಕೆಗಳನ್ನು ನೋಡಿದ್ದೇವೆ ಎಂದರು. ಮತ್ತೊಬ್ಬ ಪ್ರತಿದಿನ ತಮ್ಮ ತಂದೆ ಹತ್ತಿರದ ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗಿ ಓದುತ್ತಾರೆಂದು ಹೇಳಿದ. ಚರ್ಚೆಯಿಂದ ನನ್ನ ವಿದ್ಯಾರ್ಥಿಗಳ ಬಗ್ಗೆ ನಾನು ಸ್ವಲ್ಪ ಹೆಚ್ಚಿನದನ್ನು ತಿಳಿದುಕೊಂಡೆ.

ಅಲ್ಲಿಂದಾಚೆಗೆ, ಪ್ರತಿದಿನ ಬೆಳಗ್ಗೆ ನಾನು ವಿದ್ಯಾರ್ಥಿಗಳೊಂದಿಗೆ ಸುದ್ಧಿಯ ತುಣುಕನ್ನು ಹಂಚಿಕೊಳ್ಳತೊಡಗಿದೆ, ಪ್ರತಿಬಾರಿಯೂ ನಾನು ಪುಟಗಳನ್ನು ತಿರುವಿಹಾಕುವುದನ್ನು ಅವರು ಗಮನಿಸಿತ್ತಿರುವಾಗ ಅವರಿಗೆ ಆಸಕ್ತಿದಾಯಕವೆಂದು ತೋರುವ ಅಂಶಗಳನ್ನು ಆಯ್ಕೆಮಾಡುತ್ತಿದ್ದೆ. ಪ್ರತಿದಿನ ಪತ್ರಿಕೆ ಓದಲು ಅವಕಾಶ ಸಿಗುತ್ತಿದ್ದುದರಿಂದ ಇದು ನನಗೆ ಆನಂದಮಯವಾಗಿತ್ತು. ನನ್ನ ವಿದ್ಯಾರ್ಥಿಗಳೂ ಸ್ಥಳೀಯ ಅಥವಾ ರಾಜ್ಯಮಟ್ಟದ ಸುದ್ಧಿಗಾಗಿ ಕಾಯುತ್ತಿದ್ದರು. ಸಣ್ಣದೊಂದು ಚರ್ಚೆಯ ಮೂಲಕ, ಕೆಲವು ಹೊಸ ಪದಗಳಿದ್ದರೆ ಪರಿಚಯಿಸುತ್ತಾ, ಅವರ ಜ್ಞಾನ ಮತ್ತು ಅನುಭವಗಳಿಗೆ ಕೊಂಡಿಗಳನ್ನು ಬೆಸೆಯಲು ಸಾಧ್ಯವಾಗುತ್ತಿತ್ತು.

ಸ್ವಲ್ಪ ದಿನಗಳ ಬಳಿಕೆ, ತರಗತಿಯಲ್ಲಿ ವಾರ್ತಾಪತ್ರಿಕೆ ಮತ್ತು ಮ್ಯಾಗಜಿನ್ ಗಳ ರಾಶಿಯೇ ಬಂತು. ಬೆಳಗ್ಗೆ ತಮ್ಮ ಸಹಪಾಠಿಗಳು ಬರುವ ತನಕ ಅವುಗಳನ್ನು ಓದುವಂತೆ ಪ್ರೋತ್ಸಾಹಿಸಿದೆ. ಕೆಲದಿನಗಳ ನಂತರ, ಪ್ರತಿ ದಿನದ ಮೊದಲ 15 ನಿಮಿಷಗಳನ್ನು ಇದಕ್ಕಾಗಿಯೇ ಮೀಸಲಿಟ್ಟೆ. ಕೆಲವರು ಒಂಟಿಯಾಗಿ, ಕೆಲವರು ಜೋಡಿಯಾಗಿ ಓದತೊಡಗಿದರು. ಕೆಲ ಸಂದರ್ಭಗಳಲ್ಲಿ ನಾನು ಮೊದಲಿಗೆ ಅವರೊಂದಿಗೆ ಬಳಸಿದಂತಹ, 'ಇದು ಚೆನ್ನಾಗಿದೆಯಲ್ಲವೇ!' 'ಇದೇನಿದು' 'ಇದು ಏನು ಹೇಳುತ್ತೆ ಅಂತ ನೋಡೋಣ' ಮೊದಲಾದ ಪದಪ್ರಯೋಗಗಳನ್ನು ಅವರು ಬಳಕೆಮಾಡುವುದನ್ನು ಕೇಳಿಸಿಕೊಂಡೆ. ಕೆಲವೊಮ್ಮೆ ಹಿರಿಯ ವಿದ್ಯಾರ್ಥಿಗಳಿಗೆ ಕಿರಿಯರೊಂದಿಗೆ ಓದುವಂತೆ ಹೇಳಿದೆ. ಅಪರೂಪಕ್ಕೆ ನಿರ್ದಿಷ್ಟ ಪದಗಳ ವಿವರಣೆ ಕೊಡುವುದನ್ನು ಕೇಳಿಸಿಕೊಂಡೆ. ಇತ್ತೀಚೆಗೆ ಅವರು ಪರಸ್ಪರ, 'ಇದನ್ನು ಓದಿದ್ದೀಯಾ?' ಎಂದು ಕೇಳುತ್ತಾ, ಲೇಖನಗಳ ಸಲಹೆ ನೀಡತೊಡಗಿದ್ದಾರೆ. ಈ ಚಿಕ್ಕ ಅವಧಿಯಲ್ಲಿ, ವಿದ್ಯಾರ್ಥಿಗಳ ಆಸಕ್ತಿ ಮತ್ತು ಕೌಶಲಗಳ ಅನೌಪಚಾರಿಕ ವೀಕ್ಷಣೆಯನ್ನು ಮಾಡಲು ಸಾಧ್ಯವಾಗಿದೆ.

**ಚಿಂತನೆಗೊಂದು ಕ್ಷಣ**

- ರೇಷ್ಮಾಬಾನು ಅವರ ವಾರ್ತಾಪತ್ರಿಕೆ ಚಟುವಟಿಕೆ ಅವರ ವಿದ್ಯಾರ್ಥಿಗಳಿಗೆ ಓದುವಿಕೆಯ ಕುರಿತು ಏನನ್ನು ಕಲಿಸುತ್ತದೆ?
- ಅವರ ಮಾರ್ಗದ ಲಾಭಗಳಾವುವು? ಏನಾದರೂ ಸಂಭವನೀಯ ಲೋಪಗಳಿವೆಯೇ?
- ನಿಮ್ಮ ತರಗತಿಯಲ್ಲಿ ಅವರ ಯಾವ ಅಭ್ಯಾಸಗಳನ್ನು ಅನ್ವಯಿಸಬಹುದು?

ರೇಷ್ಮಾಬಾನು ಸುದ್ದಿಪತ್ರಿಕೆ ಓದುವ ಚಟುವಟಿಕೆಯನ್ನು ತಮ್ಮ ವಿದ್ಯಾರ್ಥಿಗಳಿಗೆ ಮಾದರಿಯಾಗಿ ತೋರಿಸಿಕೊಟ್ಟರು. ಅವರು ವಿಷಯವನ್ನು ಆಯ್ಕೆಮಾಡಿಕೊಳ್ಳುವ, ತಮಗೆ ಅತ್ಯಂತ ಆಸಕ್ತಿದಾಯಕ ಎನ್ನಿಸುವ ಸುದ್ದಿಯನ್ನು ಹಂಚಿಕೊಳ್ಳುವ ಹಾಗೂ ಅವರ ಅಭಿಪ್ರಾಯ ಮತ್ತು ಸಂಬಂಧಿತ ಅನುಭವಗಳನ್ನು ವ್ಯಕ್ತಪಡಿಸುವ ರೀತಿಯನ್ನು ತೋರಿಸಿಕೊಟ್ಟರು.

ಪ್ರತಿದಿನ ನಿಗದಿತ ಸಮಯದಲ್ಲಿ ಓದುವ ಮೂಲಕ, ಅವರು ನಿಯತವಾಗಿ ಪ್ರತೀನಿತ್ಯ ಈ ಚಟುವಟಿಕೆಯನ್ನು ಕೈಗೊಳ್ಳುವುದರ ಮಹತ್ವವನ್ನು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಓದಲು ವಾರ್ತಾಪತ್ರಿಕೆಗಳು ಮತ್ತು ಮ್ಯಾಗಜಿನ್ ಗಳನ್ನು ಒದಗಿಸುವ ಮೂಲಕ, ಅವರಿಗೆ ಆಸಕ್ತಿಗೆ ಅನುಗುಣವಾದ ಲೇಖನಗಳನ್ನು ಆಯ್ಕೆಮಾಡಿಕೊಂಡು, ತಮ್ಮ ಸಹಪಾಠಿಗಳೊಂದಿಗೆ ಅವನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸಿದರು. ಗಟ್ಟಿ-ಮೌನ ಓದು ಅಥವಾ ಜೋಡಿಗಳಲ್ಲಿ ಓದುವುದಕ್ಕೆ ಅವಕಾಶಮಾಡಿಕೊಟ್ಟು, ಎಲ್ಲರೂ ತಮ್ಮದೇ ಮಟ್ಟದಲ್ಲಿ ತೊಡಗಿಕೊಳ್ಳುವಂತೆ ಮಾಡಿದರು. ಹಿರಿಯ ವಿದ್ಯಾರ್ಥಿಗಳು ಕಿರಿಯರಿಗೆ ಓದಿಕೊಡುವ ಮೂಲಕ, ಹಿರಿಯ ವಿದ್ಯಾರ್ಥಿಗಳ ಬೆಳವಣಿಗೆ ಕೌಶಲಗಳನ್ನು ಸ್ಥಿರಗೊಳಿಸಿದರು.

ಈ ಚಟುವಟಿಕೆಯ ಒಂದು ಲೋಪವೆಂದರೆ ಬಹುತೇಕ ಸುದ್ದಿಪತ್ರಿಕೆ ಮತ್ತು ಮ್ಯಾಗಜಿನ್ ಗಳು ಕನಿಷ್ಟ ಮಟ್ಟದ ಓದುವ ಕೌಶಲವನ್ನು ನಿರೀಕ್ಷಿಸುತ್ತವೆ. ಅದೇ ರೀತಿ, ಅನೇಕ ಸುದ್ದಿಗಳಿಗೆ ಜ್ಞಾನ ಮತ್ತು ತಿಳುವಳಿಕೆಯ ಅಗತ್ಯವಿದ್ದು, ಕಿರಿಯ ಹಂತದ ವಿದ್ಯಾರ್ಥಿಗಳ ನಿರೀಕ್ಷೆಗಿಂತ ಬಲುದೂರವಿದೆ, ಆದ್ದರಿಂದ ಈ ಚಟುವಟಿಕೆ ಕಿರಿಯ ಹಂತದವರಿಗೆ ಸೂಕ್ತವಲ್ಲ.

ನಿಮ್ಮ ವಿದ್ಯಾರ್ಥಿಗಳ ಮಟ್ಟ ಏನೇ ಇರಲಿ, ಅವರು ಸ್ವಲ್ಪವಾದರೂ ಓದುವ ಅನುಭವಗಳ ಆಧಾರದ ಮೇಲೆ, ಅವರು ಧನಾತ್ಮಕ ಅಥವಾ ಋಣಾತ್ಮಕವಾಗಲೀ ಓದುವ ಕುರಿತು ಮನೋಭಾವ ಹೊಂದುವರು.

ನಿಮ್ಮ ವಿದ್ಯಾರ್ಥಿಗಳಿಗೆ ಯಾವ ರೀತಿಯ ನಿಯತವಾದ ಓದುವ ಚಟುವಟಿಕೆ ಅನುಕೂಲವಾಗಲಿದೆ? ಪ್ರತಿ ವಿದ್ಯಾರ್ಥಿಯೂ ಒಳಗೊಂಡಿದ್ದಾಳೆ/ನೆ ಎಂದು ಖಾತರಿಗೊಳಿಸಿಕೊಳ್ಳುವುದು ಹೇಗೆ? ನಿಮ್ಮ ವಿಚಾರಗಳನ್ನು ಸಹೋದ್ಯೋಗಿಗಳೊಂದಿಗೆ ಚರ್ಚಿಸಿ.

ಮುಂದಿನ ಭಾಗದಲ್ಲಿ, ತರಗತಿಯಲ್ಲಿ 'ಬುಕ್ ಟಾಕ್' ನ ಮೌಲ್ಯವನ್ನು ತಿಳಿಯುವಿರಿ. ಇದು ಒಂದು ನಿಯಮಿತ ಚಟುವಟಿಕೆಯಾಗಿದ್ದು, ನಿಮ್ಮ ಯಾವುದೇ ಪಾಠಕ್ಕೆ ಸೇರಿಸಿಕೊಳ್ಳಬಹುದು.

## 2 ಪುಸ್ತಕ ಹರಟೆ

**ಚಿಂತನೆಗೊಂದು ಕ್ಷಣ**

- ನೀವು ಓದಿ ಬಹಳ ಮೆಚ್ಚಿಕೊಂಡ, ಅದನ್ನು ಸ್ನೇಹಿತರಿಗೆ ಓದಿ ಎಂದು ಸಲಹೆ ಮಾಡಬಹುದು ಎನ್ನಿಸಿದ ಪುಸ್ತಕ ಯಾವುದು?
- ಓದಲು ಆರಂಭಿಸಿ, ಅದು ನೀರಸ ಅಥವಾ ಕಷ್ಟ ಎನಿಸಿ, ಅಷ್ಟಕ್ಕೇ ಬಿಟ್ಟುಬಿಟ್ಟ ಪುಸ್ತಕ ಯಾವುದು?
- ಯಾವುದನ್ನು ಓದಬೇಕೆನ್ನುವುದರ ಕುರಿತು ನಿಮಗೆ ನಿರ್ದಿಷ್ಟ ಆದ್ಯತೆಗಳಿವೆಯೇ?

ಈ ರೀತಿಯ ಪ್ರಶ್ನೆಗಳು ಪುಸ್ತಕ ಹರಟೆಯನ್ನು ಉತ್ತೇಜಿಸುತ್ತವೆ. ಓದುಗರಾಗಿ ನಿಮ್ಮ ಉತ್ತರಗಳು ಬಹಳ ಮುಖ್ಯ. ಈ ಕೆಳಗಿನ ಪ್ರಸಂಗ ಅಧ್ಯಯನದಲ್ಲಿ ಶಿಕ್ಷಕಿಯೊಬ್ಬರು ತಮ್ಮ ಪಾಠದಲ್ಲಿ ಪುಸ್ತಕ ಹರಟೆಯನ್ನು ಹೇಗೆ ಸೇರಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವಿರಿ.

## ಪ್ರಸಂಗ ಅಧ್ಯಯನ 2: ತರಗತಿಯಲ್ಲಿ ನ್ನು ಪ್ರೋತ್ಸಾಹಿಸುವಿಕೆ

ಬೆಂಗಳೂರಿನಲ್ಲಿ ಅರ್ಚನಾ ಎಂಟನೇ ತರಗತಿಯ ಶಿಕ್ಷಕಿ. ಇಲ್ಲಿ ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಪುಸ್ತಕ ಹರಟೆ ಪ್ರೋತ್ಸಾಹಿಸಿದ ರೀತಿಯನ್ನು ವಿವರಿಸಿದ್ದಾರೆ.

ಕಳೆದ ವರ್ಷದ ತನಕ, ನನ್ನ ಬೋಧನೆಯು, ತರಗತಿಯಲ್ಲಿ ಬಾಯ್ದರೆ ಓದು ಹಾಗೂ ಪಠ್ಯಪುಸ್ತಕದಲ್ಲಿನ ಅದಕ್ಕೆ ಸಂಬಂಧಿತ ಅರ್ಥಗ್ರಹಿಕೆ ಪ್ರಶ್ನೆಗಳಿಗೆ ವಿದ್ಯಾರ್ಥಿಗಳಿಂದ ಉತ್ತರಪಡೆಯುವುದೇ ಆಗಿತ್ತು. ಡಯಟ್ ನಲ್ಲಿನ ಕಾರ್ಯಾಗಾರದ ನಂತರ, ಓದಿದ್ದನ್ನು ನನ್ನ ವಿದ್ಯಾರ್ಥಿಗಳು ಗ್ರಹಿಸುವಂತಾಗಬೇಕಾದರೆ, ನನ್ನ ಅಭ್ಯಾಸ ಬದಲಾಗಬೇಕೆಂದು ನಾನು ತೀರ್ಮಾನಿಸಿದೆ.

ನನ್ನ ತರಗತಿಗೆ, ನಾನು ಬಾಯ್ದೆರೆ ಓದಿಗಾಗಿ ಒಂದು ವ್ಯಕ್ತಿ ಚಿತ್ರ ಆಯ್ಕೆಮಾಡಿಕೊಳ್ಳುವ ಮೂಲಕ ಆರಂಭಿಸಿದೆ. ಅದು ಎಂಟನೇ ತರಗತಿಯ ಸಿರಿಕನ್ನಡ ಪಠ್ಯಪುಸ್ತಕದಿಂದ ಆಯ್ದುಕೊಂಡ ಡಿವಿಜಿ ಯವರ ಕುರಿತಾದ 'ಸಾರ್ಥಕ ಬದುಕಿನ ಸಾಧಕ' ಎಂಬುದಾಗಿತ್ತು. ಆ ವ್ಯಕ್ತಿ ಚಿತ್ರವನ್ನು ಓದಿದ ಮೇಲೆ, ನಾನು ನನ್ನ ಪ್ರತಿಕ್ರಿಯೆಯನ್ನು ಹೀಗೆ ವ್ಯಕ್ತಪಡಿಸಿದೆ. 'ಅಬ್ಬಾ ಡಿವಿಜಿಯವರು ಎಂಥಾ ಧೀಮಂತ ನಾಯಕ, ಸರಳವಾದರೂ, ಎಂತಹ ಸಾರ್ಥಕ ಬದುಕು ಅವರದು. ನಿಮಗೇನನ್ನಿಸುತ್ತಿದೆ?'.

ಆನಂತರ ನಾನು ವಿದ್ಯಾರ್ಥಿಗಳಿಗೆ ಡಿವಿಜಿ ಯವರ ವ್ಯಕ್ತಿತ್ವದ ಕುರಿತು ಎರಡು ನಿಮಿಷಗಳ ಕಾಲ ಜೊತೆಗಾರರೊಂದಿಗೆ ಮಾತನಾಡುವಂತೆ ಹೇಳಿದೆ. ಅವರಿಗೆ ಸಹಾಯ ನೀಡುವ ಕೆಲವು ಪ್ರಶ್ನೆಗಳನ್ನು ನೀಡಿದೆ: ' ಡಿವಿಜಿಯವರ ಕುರಿತು ನಿಮಗೆ ಇಷ್ಟವಾದುದೇನು?' 'ಅವರ ಗುಣಗಳು ಏಕೆ ವಿಭಿನ್ನ ಅನ್ನಿಸುತ್ತವೆ?' 'ಅವರನ್ನು 'ಮಹಾಧೀಮಂತ' ಎನ್ನುವುದು ಸರಿಯೇ? ಏಕೆ?' ಕೊನೆಗೆ ನಾನು ವಿದ್ಯಾರ್ಥಿಗಳು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಕೊಟ್ಟೆ.

ಮೊದಲಿಗೆ, ತಮ್ಮ ಪ್ರತಿಕ್ರಿಯೆಗಳನ್ನು ಹಂಚಿಕೊಳ್ಳುವುದು ಅವರಿಗೆ ಕಷ್ಟವೆನಿಸಿತು. ಏಕೆಂದರೆ ಅವರಿಗೆ ಈ ರೀತಿ ತಮ್ಮ ಅಭಿಪ್ರಾಯ-ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿ ಅಭ್ಯಾಸವಿರಲಿಲ್ಲ. ಆದರೆ, ಈ ರೀತಿಯ ವ್ಯಕ್ತಿ ಚಿತ್ರ, ಕಲ್ಪಿತ ಅಥವಾ ಕಲ್ಪಿತವಲ್ಲದ ಲೇಖನ/ಬರಹಗಳೊಂದಿಗೆ ಚಟುವಟಿಕೆಯನ್ನು ಆಗಾಗ್ಗೆ ಮಾಡತೊಡಗಿದಾಗ, ಅವರು ತಮ್ಮ ಅನಿಸಿಕೆಗಳನ್ನು ಸರಾಗವಾಗಿ ಹಂಚಿಕೊಳ್ಳತೊಡಗಿದರು. ಒಂದು ವೇಳೆ ಬರಹ/ಲೇಖನ ಇಷ್ಟವಾಗದಿದ್ದರೆ, ಅದನ್ನೂ ಆತ್ಮವಿಶ್ವಾಸದಿಂದ ಹೇಳಬಲ್ಲರು. ಅಷ್ಟೇ ಅಲ್ಲ ಹಾಗೇಕೆ ಎಂದು ವಿವರಿಸಬಲ್ಲರು. ಬರಹ/ಲೇಖನಗಳನ್ನು ಚರ್ಚಿಸುವಾಗ ತಮ್ಮ ಅನುಭವಗಳು, ಪೂರ್ವಜ್ಞಾನದೊಂದಿಗೆ ಸಂಪರ್ಕ ಕಲ್ಪಿಸುತ್ತಾರೆ. ಈ ರೀತಿಯಾಗಿ, ಅವರು ಸ್ವತಂತ್ರವಾಗಿ ಮಾತನಾಡುವಾಗ, ಕೇವಲ ಪಠ್ಯಪುಸ್ತಕದ ಅಭ್ಯಾಸಗಳಿಗಿಂತ, ಹೆಚ್ಚು ಸಮಗ್ರವಾಗಿ ಅವರ ತಿಳುವಳಿಕೆಯನ್ನು ನಾನು ಮೌಲ್ಯಮಾಪನಮಾಡುತ್ತೇನೆ.

ಪಠ್ಯಪುಸ್ತಕದಲ್ಲಿನ ವಿಷಯಗ್ರಹಣ ಪ್ರಶ್ನೆಗಳನ್ನು ಮಾರ್ಗದರ್ಶನವಾಗಿ ಬಳಸುವುದನ್ನು ಮುಂದುವರಿಸುತ್ತಾ, ನಾನು ಯಾವಾಗಲೂ ತರಗತಿಯಲ್ಲಿ ಓದಿದ್ದದರ ಕುರಿತು ಹೆಚ್ಚಿನ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

**ಚಿಂತನೆಗೊಂದು ಕ್ಷಣ**

- ತರಗತಿಯಲ್ಲಿ ಅರ್ಚನಾ ರವರ ವಿದ್ಯಾರ್ಥಿಗಳು ಬುಕ್ ಟಾಕನ್ನು ಮಾಡುವ ಮೂಲಕ ಅವರು ಏನನ್ನು ಕಲಿಯುತ್ತಿದ್ದಾರೆ ಎಂದು ನಿಮಗನ್ನಿಸುತ್ತಿದೆ?
- ಈ ಅವಧಿಗಳಲ್ಲಿ ಅವರು ಪರಿವೀಕ್ಷಣೆ ಮಾಡುವ ಮೂಲಕ ವಿದ್ಯಾರ್ಥಿಗಳ ಓದುವಿಕೆಯ ಬೆಳೆವಣಿಗೆಯ ಕುರಿತು ಅರ್ಚನಾ ಏನು ಕಲಿಯುತ್ತಿದ್ದಾರೆ?

ಓದಿನ ಗ್ರಹಿಕೆ ಸ್ವತ: ಬೆಳವಣಿಗೆಯಾಗುವುದಿಲ್ಲ; ಅದನ್ನು ಬೋಧಿಸಬೇಕು. ಇದನ್ನು ಶಿಕ್ಷಕರು ಬರಹದ ಅರ್ಥವನ್ನು ಚಿಂತನೆಮಾಡಿ, ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವ ಮೂಲಕ ಗ್ರಹಿಕೆಯ ಪ್ರಕ್ರಿಯೆಯನ್ನು ಮಾದರಿಯಾಗಿ ತೋರಿಸಿಕೊಡಬಹುದು.
ಕೇಳಿಸಿಕೊಂಡ ಅಥವಾ ಸ್ವತ: ಓದಿದ ಲೇಖನ/ಬರಹದ ಕುರಿತು ಮತ್ತು ಅರ್ಥವಿವರಣೆ ಕೊಡಲು ಆತ್ಮವಿಶ್ವಾಸ ಬೆಳೆಸಿಕೊಳ್ಳುತ್ತಾರೆ.
ವಯಸ್ಕರಾಗಿ, ನಾವು ಸಾಮಾನ್ಯವಾಗಿ ಓದಬೇಕಾದುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ನಾವು ನಿರ್ದಿಷ್ಟ ಬಗೆಯ ಬರಹ/ಲೇಖನದ ಕುರಿತು ನಮ್ಮದೇ ಆದ ಆದ್ಯತೆಯನ್ನು ಹೊಂದಿರುತ್ತೇವೆ. ನಾವು ನಮ್ಮ ಓದಿನ ಬಗ್ಗೆ ಚಿಂತನೆಮಾಡಿ, ಇತರರೊಂದಿಗೆ ಚರ್ಚಿಸುತ್ತೇವೆ. ನಾವು ಅದನ್ನು ನಮ್ಮ ವಿದ್ಯಾರ್ಥಿಗಳು ಮಾಡುವಂತೆ ಪ್ರೋತ್ಸಾಹಿಸಬೇಕು. ತಮಗಿಷ್ಟವಾದ ಪುಸ್ತಕಗಳನ್ನು ಆಯ್ಕೆಮಾಡಿಕೊಂಡು, ಓದಿದ್ದನ್ನು ಬುದ್ಧಿವಂತಿಕೆಯಿಂದ ಪ್ರತಿಸ್ಪಂದಿಸುವಂತೆ ಅವಕಾಶಮಾಡಿಕೊಡಬೇಕು.

## ಚಟುವಟಿಕೆ 1: ಪುಸ್ತಕ ಹರಟೆ ಅವಧಿ



ಚಿತ್ರ 1ತರಗತಿಯಲ್ಲಿ ಒಂದು ಪುಸ್ತಕದ ಕುರಿತು ಮಾತನಾಡುತ್ತಿರುವುದು

ನಿಮ್ಮ ತರಗತಿಯಲ್ಲಿ ಒಂದು ಚಿಕ್ಕ ಪುಸ್ತಕ ಹರಟೆ ಅವಧಿಯನ್ನು ಯೋಜಿಸಿ. ಅದು 30 ನಿಮಿಷಗಳಿಗಿಂತ ಹೆಚ್ಚು ಇರಬಾರದು.
ಚಿಕ್ಕದಾದ ಕಲ್ಪಿತ ಅಥವಾ ಕಲ್ಪಿತವಲ್ಲದ ಬರಹ/ಲೇಖನವನ್ನು ಆಯ್ಕೆಮಾಡಿ. ಅದು ಕಥೆ, ವಾರ್ತಾಪತ್ರಿಕೆಯ ಲೇಖನ, ನಾಟಕ ಅಥವಾ ಕವಿತೆಯಾಗಿರಬಹುದು. ಅದು ಯಾವುದೇ ಆಗಿರಲಿ, ಮೊದಲಿಗೆ ಪರಿಚಿತವಲ್ಲದ ಪದಗಳ ಅರ್ಥವನ್ನು ಊಹಿಸಿ. ಆರಂಭದಲ್ಲಿ ಆಯ್ದುಭಾಗದ ಹೆಸರನ್ನು ಹಾಗೂ ಗೊತ್ತಿಲ್ಲದ ಪದಗಳನ್ನು ಪರಿಚಯಿಸುವುದರಿಂದ, ವಿದ್ಯಾರ್ಥಿಗಳ ಆತಂಕ ಕಡಿಮೆಯಾಗಿ, ಲೇಖನವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವುದು.
ಗಟ್ಟಿ ಓದು ಆದ ಮೇಲೆ, ಅದರ ಕುರಿತಾದ ನಿಮ್ಮ ಆಲೋಚನೆಗಳೂ, ನಿಮ್ಮಲ್ಲಿ ಅದು ಉಂಟುಮಾಡಿದ ಭಾವನೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿದ್ಯಾರ್ಥಿಗಳಿಗೆ ಹೇಳಿ. ಈ ರೀತಿಯಲ್ಲಿ ಪುಸ್ತಕ ಹರಟೆ ಮಾದರಿ ಮಾಡುವುದು ಮುಖ್ಯವಾದರೂ, ಆರಂಭದಲ್ಲಿ ಜಾಗರೂಕರಾಗಿರಬೇಕು ಏಕೆಂದರೆ ನೀವು ಹೇಳುವುದು ಆ ಬರಹ/ಲೇಖನ ಕುರಿತು ವಿದ್ಯಾರ್ಥಿಗಳ ಸ್ವಂತ ಪ್ರತಿಕ್ರಿಯೆಗಳ ಮೇಲೆ ಅತಿಯಾದ ಪ್ರಭಾವಬೀರಬಾರದು.
ನಂತರ ಅವರು ಪ್ರತಿಕ್ರಿಯೆಗಳನ್ನು ಅಭಿವ್ಯಕ್ತಿಸಲು ಕೆಳಗಿನ ಹೇಳಿಕೆಗಳನ್ನು ಬಳಸಬಹುದು (ಇವನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ):

- ಬರಹ/ಲೇಖನದಲ್ಲಿ ಯಾವುದು ಇಷ್ಟ/ಇಷ್ಟವಾಗಲಿಲ್ಲ.
- ಪಾತ್ರಗಳ ಕುರಿತ ಅವರ ಆಲೋಚನೆ ಏನು
- ಅದರ ಕುರಿತು ಏನಾದರೂ ಗೊಂದಲಗಳು ಇರುವುದೇ?

ಅದನ್ನು ಬೇರೆಯವರಿಗೆ ಓದುವಂತೆ ಸಲಹೆ ಮಾಡಲು ಇಷ್ಟವಿದೆಯೇ?

- ನಿಮ್ಮ ವಿದ್ಯಾರ್ಥಿಗಳು ನೀಡುವ ಎಲ್ಲ ಪ್ರತಿಕ್ರಿಯೆಗಳನ್ನು ಆಸಕ್ತಿಯಿಂದ ಕೇಳಿಸಿಕೊಳ್ಳಿ.


ನಿಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಜಾಸ್ತಿ ಇದ್ದರೆ, ಪ್ರತಿ ದಿನ ಬೇರೆ ಬೇರೆ ಗುಂಪಿನೊಂದಿಗೆ ಪುಸ್ತಕ ಹರಟೆ ಅವಧಿಯನ್ನು ಯೋಜಿಸಿ. ನೀವು ಸಣ್ಣ ಗುಂಪಿನೊಂದಿಗೆ ತೊಡಗಿರುವಾಗ, ತರಗತಿಯ ಇತರರಿಗೆ ಪುಸ್ತಕ ಹರಟೆ ಓದಿಗೆ ಸಂಬಂಧಿಸಿದ ಸ್ವತಂತ್ರ ಕಾರ್ಯ ನೀಡಿ. ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ಗುಂಪುಮಾಡುವುದರಿಂದ, ಪ್ರತಿ ಗುಂಪಿಗೆ ಸೂಕ್ತವಾದ ಲೇಖನವನ್ನು

ಆಯ್ಕೆಮಾಡಿಕೊಳ್ಳಬಹುದು. ಪುಸ್ತಕ ಹರಟೆ ಅವಧಿಗಳು, ನೀವು ವಿದ್ಯಾರ್ಥಿಗಳಿಗೆ ಗಟ್ಟಿ ಓದು ಮಾಡುವುದಕ್ಕಷ್ಟೇ ಸೀಮಿತವಾಗಬಾರದು. ಅವರು ತಮ್ಮಷ್ಟಕ್ಕೇ ಓದಿಕೊಂಡಿರುವುದರ ಕುರಿತೂ ಇರಬೇಕು. ಈ ಹಂತದಲ್ಲಿ 'ಕಲಿಕೆಗಾಗಿ ಮಾತು' ಎಂಬ ಪ್ರಮುಖ ಸಂಪನ್ಮೂಲವನ್ನು ಓದುವುದರಿಂದ ನಿಮಗೆ ಅನುಕೂಲವಾಗಬಹುದು.

**Video: Talk for learning**

## ಚಟುವಟಿಕೆ 2: ವಿದ್ಯಾರ್ಥಿ ಪುಸ್ತಕ ವಿಮರ್ಶೆಗಳು

ಪುಸ್ತಕ ಹರಟೆ ಅವಧಿಯನ್ನು, ತಾವು ಓದಿದ ಪುಸ್ತಕದ ಕುರಿತು ಚಿಕ್ಕ ವಿಮರ್ಶೆಯನ್ನು ಬರೆಯುವಂತೆ ಮಾಡುವ ಮೂಲಕ ವಿಸ್ತರಿಸಬಹುದು. ಚಿತ್ರ 2 ರಲ್ಲಿರುವ ಪುಸ್ತಕ ವಿಮರ್ಶೆ ನಮೂನೆಯನ್ನು ನಿಮಗೆ ಬೇಕಾದಂತೆ ಬದಲಿಸಿಕೊಳ್ಳಬಹುದು. ತರಗತಿ ಚರ್ಚೆಗಳಲ್ಲಿರುವಂತೆ, ತಮ್ಮ ವಿಮರ್ಶೆಗಳಲ್ಲಿ ವಿದ್ಯಾರ್ಥಿಗಳು ವ್ಯಕ್ತಪಡಿಸುವ ಎಲ್ಲ ಅಭಿಪ್ರಾಯಗಳನ್ನು ಸ್ವೀಕರಿಸಿ, ಗೌರವಿಸಬೇಕು.




**ಚಿತ್ರ 2 ಪುಸ್ತಕ ವಿಮರ್ಶೆಯ ಒಂದು ನಮೂನೆ (Source: Education World, undated)**

ಮುಂದಿನ ಭಾಗದಲ್ಲಿ, ಅರ್ಥಗ್ರಹಿಕೆ ಮತ್ತು ಸಂತೋಷದಾಯಕ ಓದಿಗೆ ಪೂರಕವಾಗುವ 'ಜೋಡಿ ಓದು' ಅಭ್ಯಾಸವನ್ನು ನೀವು ಗಮನಿಸಲಿದ್ದೀರಿ.

# 3 ಜೋಡಿಯಲ್ಲಿ ಓದುವಿಕೆ

ಜೊತೆಯಾಗಿ ಓದುವುದು, ಒಂಟಿಯಾಗಿ ಓದುವುದಕ್ಕಿಂತ ಹೆಚ್ಚು ಉಪಯುಕ್ತವಾಗಿರಬಹುದು ಮತ್ತು ಹೆಚ್ಚು ಮಜ ಕೊಡುವ ಸಾಧ್ಯತೆ ಇದೆ.

ಒಬ್ಬ ವಿದ್ಯಾರ್ಥಿ ಇನ್ನೊಬ್ಬ ವಿದ್ಯಾರ್ಥಿಗಿಂತ ಕಡಿಮೆ ಆತ್ಮವಿಶ್ವಾಸವಿದ್ದರೆ ಜೋಡಿಯಾಗಿ ಓದುವುದು ಬೆಂಬಲಯುತ, ಸಹಭಾಗಿತ್ವದ ಕಲಿಕಾ ರಚನೆಯನ್ನು ಒದಗಿಸುವುದರಿಂದ ಆದರ್ಶಕ್ರಮ ಎನ್ನಿಸುತ್ತದೆ. ವಿದ್ಯಾರ್ಥಿಗಳು ಪರಸ್ಪರರಿಗೆ ಸಮರ್ಥ ಮತ್ತು ಸೂಕ್ಷ್ಮಮನಸ್ಸಿನ 'ಶಿಕ್ಷಕ'

ರಾಗಬಹುದು. ಈ ರೀತಿಯಲ್ಲಿ ನಿಮ್ಮ ವಿದ್ಯಾರ್ಥಿಗಳನ್ನು ಸಂಘಟಿಸಲು ಹೆಚ್ಚಿನ ತಿಳುವಳಿಕೆಗಾಗಿ ಸಂಪನ್ಮೂಲ 1 'ಜೋಡಿ ಕೆಲಸದ ಬಳಕೆ' ಯನ್ನು ಓದಿ.



**Video: Using pair work**

ಜೋಡಿ ಓದುವಿಕೆಯಲ್ಲಿ, ಇಬ್ಬರು ವಿದ್ಯಾರ್ಥಿಗಳು ಒಂದು ಪುಸ್ತಕ ಬಳಸಿ ಸರದಿಯ ಮೇಲೆ ಒಂದು ವಾಕ್ಯ, ವಾಕ್ಯವೃಂದ ಅಥವಾ ಒಂದು ಪುಟವನ್ನು ಓದುವರು (ಚಿತ್ರ 3). ಮೊದಲ ಓದುಗ ಓದಿದರೆ, ಎರಡನೆಯವರು ಕೇಳಿಸಿಕೊಳ್ಳುತ್ತಾರೆ. ಆಮೇಲೆ ಎರಡನೆಯ ಓದುಗ, ಮೊದಲ ಓದುಗ ಎಲ್ಲಿ ನಿಲ್ಲಿಸುತ್ತಾರೋ, ಅಲ್ಲಿಂದ ಮುಂದುವರಿಸುತ್ತಾರೆ. ಯಾರಾದರೂ ತಪ್ಪಾಗಿ ಓದಿದರೆ, ಮತ್ತೊಬ್ಬರು ಸರಿಪಡಿಸುತ್ತಾರೆ.



**ಚಿತ್ರ** 3 ಜೋಡಿ ಓದು

ಒಂದೇ ಬಗೆಯ ಓದುವ ಸಾಮರ್ಥ್ಯದ, ಸಾಮರ್ಥ್ಯ ಹೆಚ್ಚು-ಕಡಿಮೆ ಇರುವ ಅಥವಾ ಬಹುವರ್ಗವಾಗಿದ್ದರೆ, ಹಿರಿಯ-ಕಿರಿಯ ವಿದ್ಯಾರ್ಥಿಗಳನ್ನು ಜೋಡಿಗಳಾಗಿ ಆಯ್ಕೆಮಾಡಬಹುದು. ಉತ್ತಮವಾಗಿ ಸಂಘಟಿಸುವುದು ಸಾಧ್ಯವಾದರೆ, ಜೋಡಿ ಓದುವಿಕೆಯನ್ನು ಹೆಚ್ಚು ವಿದ್ಯಾರ್ಥಿಗಳಿರುವ ತರಗತಿಗಳಲ್ಲೂ ಬಳಸಬಹುದು.

ಎರಡು ಭಾಷೆ ಬರುವ ವಿದ್ಯಾರ್ಥಿಗಳಿಗೆ ಜೋಡಿ ಓದುವಿಕೆಯ ಉಪಯುಕ್ತತೆಯನ್ನು ಗುರುತಿಸಿರುವ ಶಿಕ್ಷಕರೊಬ್ಬರ ಪ್ರಸಂಗ ಅಧ್ಯಯನವನ್ನು ಈಗ ಓದಿ.

## ಪ್ರಸಂಗ ಅಧ್ಯಯನ 3: ದ್ವಿಭಾಷಾ ಓದುವಿಕೆ ಸಹಾಯಕ್ಕಾಗಿ ಜೋಡಿ ಕೆಲಸ

*ಕೋಲಾರ ಜಿಲ್ಲೆಯ ಒಂದು ಹಳ್ಳಿಯ ಶಾಲೆಯಲ್ಲಿ ರಾಜು ಐದನೇ ತರಗತಿಗೆ ಬೋಧಿಸುತ್ತಾರೆ.*

ನನ್ನ ಕೆಲವು ವಿದ್ಯಾರ್ಥಿಗಳು ತಮ್ಮ ಮನೆಭಾಷೆಯಾದ ತೆಲುಗು ಮಾತನಾಡುತ್ತಾರೆ. ಅವರು ಶಾಲೆಯಲ್ಲಿ ಕನ್ನಡವನ್ನು ಅರ್ಥಮಾಡಿಕೊಂಡು ಮಾತನಾಡಲು ಕಲಿತಿದ್ದಾರೆ, ಆದರೆ ಗಟ್ಟಿವಾಚನ ಮಾಡಲು ಅವರಿಗೆ ಆತ್ಮವಿಶ್ವಾಸವಿಲ್ಲ. ನನ್ನ ವಿದ್ಯಾರ್ಥಿಗಳಲ್ಲಿ ಒಬ್ಬಳಾದ ತೇಜ ತರಗತಿಯಲ್ಲಿ ಪುಸ್ತಕಗಳನ್ನು ನೋಡುತ್ತಿದ್ದ ರೀತಿಯನ್ನು ಗಮನಿಸಿದೆ. ಅವಳು ಚಿತ್ರಗಳನ್ನು ನೋಡಿ ಅರ್ಥಮಾಡಿಕೊಂಡಂತೆ ಕಂಡಳಾದರೂ, ಪದಗಳನ್ನು ಅರ್ಥಮಾಡಿಕೊಂಡಂತೆ ಕಾಣಲಿಲ್ಲ.

ಒಂದು ದಿನ, ಅವಳು ಪುಸ್ತಕವನ್ನು ನೋಡುತ್ತಿದ್ದಾಗ, ನಾನು ಅವಳ ಪಕ್ಕದಲ್ಲಿ ಕುಳಿತು, ಆ ಕಥೆ ಏನೆಂದು ಕೇಳಿದೆ. ನನ್ನ ಪ್ರಶ್ನೆಯನ್ನು

ಅರ್ಥಮಾಡಿಕೊಂಡಳು, ಆದರೆ ಉತ್ತರಿಸಲು ಅವಳಿಗೆ ಕಷ್ಟವಾಯಿತು. ಆದ್ದರಿಂದ ನಾನು ಪದಗಳು ಮತ್ತು ಚಿತ್ರಗಳತ್ತ ಗುರುತಿಸುತ್ತಾ, ಓದಿದೆ. ಆಮೇಲೆ, ಕೆಲವು ಪ್ರಶ್ನೆಗಳನ್ನು ಕೇಳಿದಾಗ, ಅವಳು ತೆಲುಗು-ಕನ್ನಡ ಮಿಶ್ರಿತ ಭಾಷೆಯಲ್ಲಿ ಉತ್ತರಿಸಿದಳು. ತೆಲುಗು ಮತ್ತು ಕನ್ನಡ ಮಾತನಾಡುವ ಒಬ್ಬ ಹಿರಿಯ ವಿದ್ಯಾರ್ಥಿಯಿಂದ ತೇಜಳಿಗೆ ಓದಿಸುವ ಯೋಚನೆ ಹೊಳೆಯಿತು. ಅವನು ಓದಿ, ಅವಳ ಮನೆಭಾಷೆಯಲ್ಲಿ ಅರ್ಥವನ್ನು ವಿವರಿಸಿದನು. ತೇಜ ಗಮನವಿಟ್ಟು ಕೇಳಿಸಿಕೊಂಡಳಲ್ಲದೆ, ತೆಲುಗು ಮತ್ತು ಕನ್ನಡ ಮಿಶ್ರಿತ ಭಾಷೆಯಲ್ಲಿ ಅವನ ಪ್ರಶ್ನೆಗಳಿಗೆ ಉತ್ತರಿಸಿದಳು.

ತೇಜಳಿಗೆ ಖುಷಿಕೊಡುವಂತಹ ಆಕರ್ಷಕ ಚಿತ್ರಗಳಿರುವ ಪುಸ್ತಕಗಳಿಗಾಗಿ ನಾನು ಹುಡುಕಾಡಿದೆ. ಪ್ರಸಿದ್ಧ ಜಾನಪದ ಕಥೆಗಳಿರುವ ಸರಳ ವಾಕ್ಯಾಂಶಗಳು ಮತ್ತೆ ಮತ್ತೆ ಪುನರಾವರ್ತನೆಯಾಗುವ ಪುಸ್ತಕವೊಂದು ಸಿಕ್ಕಿತು. ನನ್ನ ಸಹೋದ್ಯೋಗಿಯೊಬ್ಬರಲ್ಲಿ ಈ ಪುಸ್ತಕವನ್ನು ತೆಲುಗಿಗೆ ಭಾಷಾಂತರಿಸುವಂತೆ ಕೇಳಿಕೊಂಡೆ. ಇದರಿಂದ ತೇಜಳಿಗೆ ಕನ್ನಡ ಮತ್ತು ಮನೆಭಾಷೆ-ಎರಡರಲ್ಲೂ ಬರವಣಿಗೆ ಲಭ್ಯವಾದಂತಾಯಿತು. ಕ್ರಮೇಣ, ಕನ್ನಡ ಅವಳಿಗೆ ಹೆಚ್ಚು ಪರಿಚಿತವಾಯಿತಲ್ಲದೆ, ಈ ಪುಸ್ತಕಗಳನ್ನು ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳತೊಡಗಿದಳು. ಈಗ ಅವಳು ಹೆಚ್ಚು ಉದ್ದನೆಯ ವಾಕ್ಯಗಳಿರುವ ಸ್ವಲ್ಪ ಕಷ್ಟಕರವಾದ ಪುಸ್ತಕಗಳನ್ನು ಓದುತ್ತಿದ್ದಾಳೆ. ಅವಳ ಪ್ರಗತಿಯನ್ನು ವೀಕ್ಷಿಸುವುದು ತುಂಬಾ ತೃಪ್ತಿನೀಡಿದೆ.

### ಚಿಂತನೆಗೊಂದು ಕ್ಷಣ

- ಶಾಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಮನೆಭಾಷೆಯನ್ನು ಬೆರಕೆ ಮಾಡುವುದು ಸೂಕ್ತವೆಂದು ನಿಮಗನ್ನಿಸುತ್ತದೆಯೇ? ಏಕೆ? ಏಕೆ ಅಲ್ಲ?
- ತೆಲುಗು ಗೊತ್ತಿದ್ದ ವಿದ್ಯಾರ್ಥಿಯೊಂದಿಗಿನ ಜೋಡಿ ಓದು ತೇಜಳಿಗೆ ಹೇಗೆ ಸಹಾಯಮಾಡಿತು?

ನಮ್ಮೆಲ್ಲಾ ಭಾಷೆಗಳೂ ಮೌಲ್ಯಯುತ ಸಂಪನ್ಮೂಲಗಳಾಗಿರುವ ವೈವಿಧ್ಯಮಯ ಬಹುಭಾಷಾ ಸಮಾಜದಲ್ಲಿ ನಾವು ವಾಸಿಸುತ್ತಿದ್ದೇವೆ. ಮನೆ-ಭಾಷೆಯನ್ನು ಬಳಸುವಂತೆ ನಿಮ್ಮ ವಿದ್ಯಾರ್ಥಿಗಳಿಗೆ ಪ್ರೋತ್ಸಾಹನೀಡುವುದರಿಂದ, ಅವರು ಶಾಲೆಯಲ್ಲಿ ಆರಾಮವಾಗಿ ಮತ್ತು ಆತ್ಮವಿಶ್ವಾಸದಿಂದ ಇರಬಹುದು. ಅಲ್ಲದೆ ಅದು ಅವರ ಕನ್ನಡವನ್ನು ಉತ್ತಮಪಡಿಸಲು ಸಹಾಯಮಾಡುತ್ತದೆ. ನಿಮಗೆ ಅವರ ಮನೆಭಾಷೆಯನ್ನು ಮಾತನಾಡಲು ಗೊತ್ತಿಲ್ಲದಿದ್ದರೂ ಕೂಡ, ನಿಮ್ಮ ಶಾಲೆಯಲ್ಲಿ ಇವರಿಗೆ ಸಹಾಯಮಾಡುವ ಇತರ ವಿದ್ಯಾರ್ಥಿಗಳಿರಬಹುದು. ಒಂದೇ ಮನೆ ಭಾಷೆಯನ್ನು ಮಾತನಾಡುವ ವಿದ್ಯಾರ್ಥಿಗಳನ್ನು ಜೋಡಿಯಲ್ಲಿ ಅಥವಾ ಸಣ್ಣ ಗುಂಪುಗಳಲ್ಲಿ ಓದುವಂತೆ ಪ್ರೋತ್ಸಾಹಿಸಬೇಕು. ಈ ರೀತಿಯಾಗಿ ಶಾಲಾ ಭಾಷೆಯನ್ನು ಗಳಿಸಿಕೊಳ್ಳಲು ಸಹಾಯಕವಾಗಿ ಅವರ ಮನೆ ಭಾಷೆಯನ್ನು ಬಳಸುವ ಮೂಲಕ ಅವರು ಪರಸ್ಪರ ಸಹಾಯಮಾಡಿಕೊಳ್ಳಬಹುದು.

ನಿಮ್ಮ ತರಗತಿಯಲ್ಲಿ ಜೋಡಿ ಓದುವಿಕೆಯನ್ನು ಬಳಸಿಕೊಳ್ಳಲು ಸಹಾಯಕವಾಗುವಂತೆ ಮುಂದಿನ ಚಟುವಟಿಕೆಯನ್ನು ಯೋಜಿಸಲಾಗಿದೆ.

### ಚಟುವಟಿಕೆ 3: ಜೋಡಿ ಓದುವಿಕೆಯನ್ನು ಪರಿಚಯಿಸುವುದು ಮತ್ತು ಸಂಘಟಿಸುವುದು

ಈ ಚಟುವಟಿಕೆಯನ್ನು, ಜೋಡಿಗಳಲ್ಲಿ ಅಥವಾ ಮೂರು-ನಾಲ್ಕು ವಿದ್ಯಾರ್ಥಿಗಳ ಸಣ್ಣ ಗುಂಪುಗಳಲ್ಲಿ ಮಾಡಬಹುದು. ಯಾವ ವಿದ್ಯಾರ್ಥಿಗಳನ್ನು ಜೋಡಿ ಅಥವಾ ಗುಂಪಿನಲ್ಲಿ ಸೇರಿಸಬಯಸುತ್ತೀರಿ ಎಂಬುದನ್ನು ಮುಂಚಿತವಾಗಿಯೇ ತೀರ್ಮಾನಿಸಿ. ಒಂದೇ ಅಥವಾ ಬೇರೆ ಬೇರೆ ಸಾಮರ್ಥ್ಯಗಳಿರುವಂತೆ ಹೊಂದಿಸಬಹುದೇ? ವಿದ್ಯಾರ್ಥಿಗಳು ಏನನ್ನು ಓದುತ್ತಾರೆ ಎಂಬುದನ್ನು ಆಯ್ಕೆಮಾಡಿ, ಅದರ ಸಾಕಷ್ಟು ಪ್ರತಿಗಳು ಇರುವಂತೆ ಗಮನವಹಿಸಿ.

ಜೋಡಿಯಾಗಿ ಓದುವುದು ಹೇಗೆ ಎನ್ನುವುದರ ಮಾದರಿ ತೋರಿಸಿ. ಅದರಿಂದ ವಿದ್ಯಾರ್ಥಿಗಳಿಗೆ ತಮ್ಮಿಂದ ಏನನ್ನು ನಿರೀಕ್ಷಿಸಲಾಗುತ್ತಿದೆ ಎಂಬುದು ತಿಳಿಯುತ್ತದೆ. ಅವರು ಓದಬೇಕಾದ ಪುಸ್ತಕ ಅಥವಾ ಲೇಖನವನ್ನು ತೋರಿಸಿ. ನಿಮ್ಮ ಜೋಡಿಯಾಗಿ ಬರುವಂತೆ ಒಬ್ಬರನ್ನು ಆಯ್ಕೆಮಾಡಿ. ಮೊದಲಿಗೆ ಒಟ್ಟಾಗಿ ಗಟ್ಟಿಯಾಗಿ ಓದುತ್ತೇವೆಂದು, ಆಮೇಲೆ ಸರದಿಯಲ್ಲಿ ಓದುತ್ತೇವೆ ಎಂದು ವಿವರಿಸಿ. ಮೊದಲಿಗೆ ಒಟ್ಟಾಗಿ ಮೊದಲ ವಾಕ್ಯವೃಂದವನ್ನು ಓದಿ. ಆ ನಂತರ ಮುಂದಿನ ವಾಕ್ಯವೃಂದವನ್ನು ಓದಲು ವಿದ್ಯಾರ್ಥಿಗೆ ಬಿಡಿ. ಮತ್ತೆ ನೀವು ಓದಿ. ಹೀಗೆ ಅನೇಕ ಸಾರಿ ಮಾಡಿ.

ಈ ಮೊದಲ ವಿದ್ಯಾರ್ಥಿಯೊಂದಿಗೆ ಇನ್ನೊಬ್ಬನನ್ನು ಆಯ್ಕೆಮಾಡಿ, ಜೋಡಿಮಾಡಿ. ಅವರು ಜೋಡಿಯಲ್ಲಿ ಓದುವಿಕೆಯನ್ನು ಹೇಗೆ ಮಾಡಬೇಕೆಂದು ಪ್ರದರ್ಶಿಸಲಿ. ದೊಡ್ಡ ಗುಂಪುಗಳನ್ನು ಮಾಡಲು ಯೋಜಿಸಿದ್ದಲ್ಲಿ, ಮೂರು ಅಥವಾ ನಾಲ್ಕನೆಯ ವಿದ್ಯಾರ್ಥಿ ಸೇರಿಕೊಳ್ಳುವಂತೆ ಹೇಳಿ.

ಒಂದು ವೇಳೆ ಅವರ ಜೊತೆಗಾರ ಅಥವಾ ಗುಂಪಿನ ಸದಸ್ಯನಿಗೆ ತೊಂದರೆ ಇದ್ದಲ್ಲಿ, ಸಹಾಯಮಾಡುವ ಮುನ್ನ ಕೆಲವು ಸೆಕೆಂಡ್ ಗಳು ಕಾಯುವಂತೆ, ಅವರಿಗೇ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಅವಕಾಶಕೊಡಬೇಕೆಂದು ಹೇಳಿ. ಅಂತಹ ವಿದ್ಯಾರ್ಥಿಗೆ ಸುಳಿವು ನೀಡುವುದು, ಉದಾಹರಣೆಗೆ ಪದದ ಮೊದಲ ಅಕ್ಷರ ನೀಡುವುದು, ಪೂರ್ಣ ಪದ ಹೇಳುವುದಕ್ಕಿಂತ ಉತ್ತಮವೆಂದು ವಿವರಿಸಿ.

ಆರಂಭದಲ್ಲಿ, ಜೋಡಿ ಓದುವಿಕೆ ಒಟ್ಟು ಹತ್ತು ನಿಮಿಷಗಳದ್ದಾಗಿರಬೇಕು, ಆಮೇಲೆ ವಿದ್ಯಾರ್ಥಿಗಳು ಈ ಚಟುವಟಿಕೆಗೆ ಹೊಂದಿಕೊಂಡಂತೆ 30 ನಿಮಿಷಗಳವರೆಗೆ ಮಾತ್ರ ಇರಬೇಕು. ತಮ್ಮ ಸಹಪಾಠಿಗಳಿಗೆ ತೊಂದರೆಯಾಗದಂತೆ, ಕಡಿಮೆ ಧ್ವನಿಯಲ್ಲಿ ಬಾಯ್ದೆರೆ ಓದು ಮಾಡುವಂತೆ ಪ್ರೋತ್ಸಾಹಿಸಿ.

ತರಗತಿಯಲ್ಲಿ ಸುತ್ತಾಡುತ್ತಾ, ಚಟುವಟಿಕೆಯನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿರುವುದನ್ನು ಪರಿಶೀಲಿಸಲು ಗಮನವಿಟ್ಟು ಕೇಳಿಸಿಕೊಳ್ಳಿ. ಓದುವುದಕ್ಕೆ ತೊಂದರೆಯಾಗುತ್ತಿರುವವರಿಗೆ ಸಹಾಯಮಾಡಿ. ಯಾರು ಒಟ್ಟಾಗಿ ಕಾರ್ಯಮಾಡಿದರು, ಎಷ್ಟು ಚೆನ್ನಾಗಿ ಮಾಡಿದರು ಎಂಬುದನ್ನು ಟಿಪ್ಪಣಿ ಮಾಡಿಕೊಳ್ಳಿ. ಕೆಲವು ವಿದ್ಯಾರ್ಥಿಗಳು ಪರಸ್ಪರ ಒಟ್ಟಾಗಿ ಕಾರ್ಯಮಾಡಲು ಸೂಕ್ತವಾಗಿದ್ದರೂ, ಆಗಾಗ್ಗೆ ಅವರನ್ನು ಬದಲಾಯಿಸುವುದು ಸಹಾಯಕ.

ಚಟುವಟಿಕೆಯ ನಂತರ, ಅವರು ಖುಷಿಪಟ್ಟರೇ? ಉಪಯುಕ್ತವಾಯಿತೇ? ಎಂಬುದನ್ನು ಕೇಳಿ. ಪರಸ್ಪರ ಸಹಾಯ ಮಾಡಿದ್ದಕ್ಕೆ ಪ್ರಶಂಸೆ ನೀಡಿ. ಇದರ ನಂತರ ಬರಹ/ಲೇಖನ ಕುರಿತು ಪುಸ್ತಕ-ಹರಟೆ ಅವಧಿಯನ್ನು ಅನುಸರಿಸಬಹುದು.

## 4 ಸಾರಾಂಶ

ಶಾಲೆಯ ಒಳಗೆ ಮತ್ತು ಹೊರಗೆ ನಿಮ್ಮ ವಿದ್ಯಾರ್ಥಿಗಳು ವಿವಿಧ ಶ್ರೇಣಿಯ ಬರಹಗಳನ್ನು ಉತ್ಸಾಹ, ಆತ್ಮವಿಶ್ವಾಸದಿಂದ ಮತ್ತು ಚಿಂತನಾಶೀಲರಾಗಿ ಓದುವಂತೆ ಮಾಡಲು ನೀವು ವಹಿಸಬೇಕಾದ ಪಾತ್ರದ ಕುರಿತು ಈ ಘಟಕ ಗಮನಹರಿಸಿದೆ. ಈ ಚಟುವಟಿಕೆಯಲ್ಲಿ ನಿಮ್ಮ ವಿದ್ಯಾರ್ಥಿಗಳ ಧನಾತ್ಮಕ ತೊಡಗುವಿಕೆಗಾಗಿ, ಆನಂದದಾಯಕ ಓದುವಿಕೆಯನ್ನು ಮಾದರಿಯಾಗಿಸುವ ನಿಮ್ಮ ಪಾತ್ರ ಅತ್ಯಂತ ಪ್ರಮುಖವಾದುದು.

ತರಗತಿಯಲ್ಲಿ ಓದುವಿಕೆಯ ಬೆಳವಣಿಗೆಯನ್ನು ಬೆಂಬಲಿಸುವುದಕ್ಕಾಗಿ ಆಗಾಗ್ಗೆ ಬಳಕೆಮಾಡುವಂತಹ ಹಲವಾರು ಚಟುವಟಿಕೆಗಳನ್ನು ಈ ಘಟಕವು ಸೂಚಿಸುತ್ತದೆ. ಇವು ಪುಸ್ತಕ ಹರಟೆ - ತಾವು ಓದಿರುವುದರ ಕುರಿತು ತಮ್ಮ ಪ್ರತಿ ಕ್ರಿಯೆಗಳನ್ನು ಹಂಚಿಕೊಳ್ಳಲು ಮೌಲ್ಯಯುತ ಅವಕಾಶವನ್ನು ಒದಗಿಸುತ್ತದೆ; ಜೋಡಿಯಲ್ಲಿ ಓದುವಿಕೆ-ಒಟ್ಟಾಗಿ ಓದಿ ಚರ್ಚಿಸಬಹುದು. ಈ ಚಟುವಟಿಕೆಗಳ ಮೂಲಕ ಓದಿನ ಅಭ್ಯಾಸ ಉತ್ತಮ

ಪಡಿಸಬಹುದಾದ ಕೌಶಲವಾಗಿದ್ದು,  ನಿಮ್ಮ ವಿದ್ಯಾರ್ಥಿಗಳು ಓದುವಿಕೆಯನ್ನು ಮತ್ತು ಅದರ ಕುರಿತು ಮಾತನಾಡುವುದನ್ನು ಆನಂದಿಸಿದರೆ, ಅವರು ಇದನನ್ನೇ ಹೆಚ್ಚು ಹೆಚ್ಚು ಮಾಡಲು ಬಯಸುತ್ತಾರೆ.

# ಸಂಪನ್ಮೂಲಗಳು

## ಸಂಪನ್ಮೂಲ 1:  ಜೋಡಿಕೆಲಸದ ಬಳಕೆ

ನಿತ್ಯಜೀವನದಲ್ಲಿ ಜನರು ಜೊತೆಗೂಡಿ ಕೆಲಸ ಮಾಡುತ್ತಾರೆ, ಮಾತನಾಡುತ್ತಾರೆ, ಆಲಿಸುತ್ತಾರೆ ಹಾಗೂ ಇತರರು ಏನು ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎಂಬುದನ್ನು ಗಮನಿಸುತ್ತಾರೆ. ಈ ರೀತಿಯಾಗಿ ಜನ ಕಲಿಯುತ್ತಾರೆ. ನಾವು ಇತರರೊಂದಿಗೆ ಮಾತನಾಡುವಾಗ, ಹೊಸ ವಿಚಾರಗಳು ಮತ್ತು ಮಾಹಿತಿಯನ್ನು ಪಡೆಯುತ್ತೇವೆ. ತರಗತಿಗಳಲ್ಲಿ, ಎಲ್ಲವೂ ಶಿಕ್ಷಕ-ಕೇಂದ್ರಿತವಾಗಿದ್ದರೆ, ಆಗ ಅನೇಕ ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯನ್ನು ಪ್ರದರ್ಶಿಸಲು ಅಥವಾ ಪ್ರಶ್ನೆ ಕೇಳಲು ಸಾಕಷ್ಟು ಸಮಯ ಸಿಗುವುದಿಲ್ಲ. ಕೆಲವು ವಿದ್ಯಾರ್ಥಿಗಳು ಸಂಕ್ಷಿಪ್ತ ಉತ್ತರಗಳನ್ನಷ್ಟೆ ಕೊಡಬಹುದು ಹಾಗೂ ಇನ್ನು ಕೆಲವರು ಏನನ್ನೂ ಹೇಳದೇ ಇರಬಹುದು. ದೊಡ್ಡ ತರಗತಿಗಳಲ್ಲಿ, ಪರಿಸ್ಥಿತಿ ಇನ್ನೂ ಕೆಟ್ಟದಾಗಿದ್ದು, ಕೆಲವೇ ಕೆಲವು ವಿದ್ಯಾರ್ಥಿಗಳು ಮಾತ್ರ ಮಾತನಾಡುತ್ತಾರೆ.

### ಜೋಡಿಕೆಲಸವನ್ನು ಏಕೆ ಉಪಯೋಗಿಸಬೇಕು?

ಜೋಡಿಕೆಲಸವು ವಿದ್ಯಾರ್ಥಿಗಳು ಮಾತನಾಡಿ ಕಲಿಯಲು ಇರುವ ಒಂದು ಸಹಜ ವಿಧಾನ. ಇದು ಅವರಿಗೆ ಆಲೋಚಿಸಲು ಹಾಗೂ ವಿಚಾರ ಮತ್ತು ಹೊಸಭಾಷೆಯನ್ನು ಅಭ್ಯಾಸ ಮಾಡಲು ಅವಕಾಶ ಮಾಡಿಕೊಡುತ್ತದೆ.  ಹೊಸ ಕೌಶಲಗಳು ಮತ್ತು ಪರಿಕಲ್ಪನೆಗಳನ್ನು ರೂಢಿಗತ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಅಲ್ಲದೆ ದೊಡ್ಡ ತರಗತಿಗಳಿಗೂ ಉಪಯೋಗಕಾರಿ.

ಜೋಡಿಕೆಲಸವು ಎಲ್ಲ ವಿಷಯಗಳಿಗೂ ಹಾಗೂ ಎಲ್ಲ ವಯೋಮಾನದವರಿಗೂ ಸೂಕ್ತವಾದುದು. ಇದು ವಿಶೇಷವಾಗಿ ಬಹುಭಾಷೆಯ, ಬಹುವರ್ಗದ ತರಗತಿಗಳಲ್ಲಿ ಉಪಯುಕ್ತ. ಏಕೆಂದರೆ ಪರಸ್ಪರ ಸಹಾಯ ಮಾಡಲು ಸಾಧ್ಯವಾಗುವಂತಹ ಜೋಡಿಗಳನ್ನು ವ್ಯವಸ್ಥೆ ಮಾಡಬಹುದು. ನೀವು ನಿರ್ದಿಷ್ಟ ಕಾರ್ಯಗಳನ್ನು ಯೋಜಿಸಿ, ಕಲಿಯುತ್ತಿರುವ ಮತ್ತು ಪ್ರಗತಿ ಹೊಂದುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಮಾಡಲು ನಿಯತ ಯೋಜನೆ (routine) ಸ್ಥಾಪಿಸಿದಾಗ ಇದು ಅತ್ಯಂತ ಸಮರ್ಪಕವಾಗಬಲ್ಲದು. ಇಂತಹ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಜೋಡಿಯಾಗಿ ಕುಳಿತು ಕೆಲಸ ಮಾಡಲು ರೂಢಿ ಮಾಡಿಕೊಂಡು, ಸಂತಸದಿಂದ ಕಲಿಯುವರು.

### ಜೋಡಿಕೆಲಸಕ್ಕಾಗಿ ಕಾರ್ಯಗಳು (Tasks)

ಕಲಿಕೆಯ ಉದ್ದೇಶಿತ ಫಲಿತವನ್ನು ಆಧರಿಸಿ, ಜೋಡಿಕೆಲಸದ ವಿವಿಧ ಕಾರ್ಯಗಳನ್ನು ನೀವು ಉಪಯೋಗಿಸಬಹುದು. ಒಂಟಿಯಾಗಿ ಕಾರ್ಯನಿರ್ವಹಿಸುವುದಕ್ಕಿಂತ ಜತೆಯಾಗಿ ನಿರ್ವಹಿಸಿದರೆ ಹೆಚ್ಚು ಕಲಿಯಲು ನೆರವಾಗಲು ಜೋಡಿಕೆಲಸದ ಕಾರ್ಯವು ಸ್ಪಷ್ಟ ಮತ್ತು ಸೂಕ್ತವಾಗಿರಬೇಕು. ಆಗ. ತಮ್ಮ ವಿಚಾರಗಳ ಕುರಿತು ಮಾತನಾಡುವ ಮೂಲಕ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಅವುಗಳ ಕುರಿತು ಆಲೋಚಿಸುತ್ತಾ, ಅವುಗಳನ್ನು ಇನ್ನಷ್ಟು ಉತ್ತಮಪಡಿಸುತ್ತಾರೆ.

ಜೋಡಿಕೆಲಸದ ಕಾರ್ಯಗಳು ಇವುಗಳನ್ನು ಒಳಗೊಂಡಿರಬಹುದು:

- **'ಆಲೋಚಿಸಿ-ಜೋಡಿಯಾಗಿ-ಹಂಚಿಕೊಳ್ಳಿ'**: ವಿದ್ಯಾರ್ಥಿಗಳು ಒಂದು ಸಮಸ್ಯೆ ಅಥವಾ ವಿಚಾರದ ಕುರಿತು ಮೊದಲು ತಮ್ಮಷ್ಟಕ್ಕೆ ತಾವೇ ಆಲೋಚಿಸಿ, ನಂತರ ಜೋಡಿಗಳಲ್ಲಿ ಅದಕ್ಕೆ ಸಾಧ್ಯವಿರುವ ಉತ್ತರಗಳನ್ನು ಪತ್ತೆಹಚ್ಚಿದ ನಂತರ ಇತರ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಅವುಗಳನ್ನು ಹಂಚಿಕೊಳ್ಳುತ್ತಾರೆ. ಇದನ್ನು ಅಕ್ಷರ ಜ್ಞಾನ, ಲೆಕ್ಕ, ವಸ್ತುಗಳ ವರ್ಗೀಕರಣ ಅಥವಾ ಅನುಕ್ರಮಗೊಳಿಸುವಿಕೆ, ವಿವಿಧ ಅಭಿಪ್ರಾಯಗಳನ್ನು ನೀಡುವುದು, ಕಥೆಯಲ್ಲಿ ಪಾತ್ರಗಳಂತೆ ನಟನೆ ಇತ್ಯಾದಿಗಳಿಗಾಗಿ ಬಳಸಬಹುದು.
- **ಮಾಹಿತಿಯನ್ನು ಹಂಚಿಕೊಳ್ಳುವುದು**: ಅರ್ಧ ತರಗತಿಗೆ ಒಂದು ವಿಷಯ ವಸ್ತುವಿನ ಒಂದು ಅಂಶದ ಕುರಿತ ಮಾಹಿತಿಯನ್ನು ಕೊಟ್ಟು. ಇನ್ನರ್ಧ ತರಗತಿಗೆ ಅದೇ ವಿಷಯ ವಸ್ತುವಿನ ಬೇರೆ ಅಂಶದ ಕುರಿತ ಮಾಹಿತಿಯನ್ನು ಕೊಡುವುದು. ನಂತರ ಅವರು ಜೋಡಿಯಲ್ಲಿ ಕಾರ್ಯಮಾಡಿ ಒಂದು ಸಮಸ್ಯೆಗೆ ಪರಿಹಾರ ಹೇಳಲು ಅಥವಾ ಒಂದು ನಿರ್ಧಾರಕ್ಕೆ ಬರಲು ತಮ್ಮ ಮಾಹಿತಿಯನ್ನು ಹಂಚಿಕೊಳ್ಳುತ್ತಾರೆ.

- **ಆಲಿಸುವಿಕೆಯಂತಹ ಕೌಶಲಗಳನ್ನು ಅಭ್ಯಾಸ ಮಾಡುವುದು:** ಒಬ್ಬ ವಿದ್ಯಾರ್ಥಿಯು ಕಥೆಯನ್ನು ಓದಿದರೆ, ಇನ್ನೊಬ್ಬ ಪ್ರಶ್ನೆಗಳನ್ನು ಕೇಳುವುದು; ಒಬ್ಬರು ಒಂದು ಆಯ್ದ ಲೇಖನ ಓದಿದರೆ, ಮತ್ತೊಬ್ಬಳು ಅದನ್ನು ಬರೆದುಕೊಳ್ಳುವುದು; ಒಬ್ಬ ವಿದ್ಯಾರ್ಥಿ ಒಂದು ಚಿತ್ರವನ್ನು ವರ್ಣಿಸಿದರೆ, ಮತ್ತೊಬ್ಬ ವಿವರಣೆ ಆಧರಿಸಿ, ಚಿತ್ರ ಕಂಡುಹಿಡಿಯುವುದು.
- **ಸೂಚನೆಗಳನ್ನು ಅನುಸರಿಸುವುದು :** ಒಬ್ಬ ವಿದ್ಯಾರ್ಥಿ/ನಿ ಇನ್ನೊಬ್ಬರಿಗೆ ಕಾರ್ಯವನ್ನು ಪೂರ್ಣಗೊಳಿಸಲು ಸೂಚನೆಗಳನ್ನು ಓದುವುದು.
- **ಕಥೆ ಹೇಳುವಿಕೆ ಅಥವಾ ಪಾತ್ರಾಭಿನಯ:** ವಿದ್ಯಾರ್ಥಿಗಳು ತಾವು ಕಲಿಯುವ ಭಾಷೆಯಲ್ಲಿ ಜೋಡಿಯಲ್ಲಿ ಕಥೆ ಕಟ್ಟುವುದು ಅಥವಾ ಸಂಭಾಷಣೆಯನ್ನು ಬರೆಯುವುದು.

## ಎಲ್ಲರ ಒಳಗೊಳ್ಳುವಿಕೆಗಾಗಿ ಜೋಡಿಗಳ ನಿರ್ವಹಣೆ

ಜೋಡಿ ಕೆಲಸ ಎಂದರೆ ಎಲ್ಲರನ್ನು ಒಳಗೊಳ್ಳುವುದಾಗಿದೆ. ವಿದ್ಯಾರ್ಥಿಗಳು ಭಿನ್ನವಾಗಿರುವುದರಿಂದ, ಅವರು ಏನನ್ನು ಮಾಡಬೇಕು, ಏನನ್ನು ಕಲಿಯುತ್ತಾರೆ ಹಾಗೂ ಅವರಿಂದ ಏನನ್ನು ನಿರೀಕ್ಷಿಸಲಾಗುತ್ತದೆ ಎಂದು ಪ್ರತಿಯೊಬ್ಬರೂ ತಿಳಿದಿರುವಂತೆ ಜೋಡಿಗಳನ್ನು ನಿರ್ವಹಿಸಬೇಕು. ನಿಮ್ಮ ತರಗತಿಯಲ್ಲಿ ಜೋಡಿಕೆಲಸವನ್ನು ರೂಢಿಗತಗೊಳಿಸಲು ಈ ಕೆಳಗಿನವುಗಳನ್ನು ಅನುಸರಿಸಿ:

- ವಿದ್ಯಾರ್ಥಿಗಳು ಕಾರ್ಯನಿರತರಾಗುವಂತೆ ಜೋಡಿ ಮಾಡಿ. ವಿದ್ಯಾರ್ಥಿಗಳು ಕೆಲವೊಮ್ಮೆ ತಮ್ಮ ಸ್ನೇಹಿತ/ತೆಯೊಂದಿಗೆ ಸೇರಿ ಕಾರ್ಯನಿರತರಾಗುತ್ತಾರೆ; ಕೆಲವೊಮ್ಮೆ ಇಲ್ಲ. ಅವರ ಕಲಿಕೆಯನ್ನು ಹೆಚ್ಚಿಸುವುದಕ್ಕಾಗಿಯಷ್ಟೇ ನೀವು ಜೋಡಿಯನ್ನು ನಿರ್ಧರಿಸುತ್ತೀರಿ ಎಂಬುದನ್ನು ಅರ್ಥ ಮಾಡಿಸಿ.
- ಹೆಚ್ಚು ಸವಾಲಾಗಿಸಲು, ಕೆಲವೊಮ್ಮೆ ನೀವು ಬೇರೆ ಬೇರೆ ಸಾಮರ್ಥ್ಯದ ಹಾಗೂ ಬೇರೆ ಬೇರೆ ಭಾಷೆಯವರಾದ ವಿದ್ಯಾರ್ಥಿಗಳನ್ನು ಜೋಡಿಯಾಗಿಸಿ, ಅವರು ಪರಸ್ಪರ ನೆರವಾಗುವಂತೆ ಮಾಡಿ; ಕೆಲವೊಮ್ಮೆ ಒಂದೇ ಮಟ್ಟದ ವಿದ್ಯಾರ್ಥಿಗಳು ಜೋಡಿ ಮಾಡಿ.
- ನಿಮ್ಮ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ನೀವು ತಿಳಿಯಲು, ಅದರಂತೆ ಜೋಡಿ ಮಾಡಲು ದಾಖಲೆಗಳನ್ನಿಡಿ.
- ಆರಂಭದಲ್ಲಿ, ಜನ ಎಲ್ಲೆಲ್ಲಿ ಸಹಯೋಗದಿಂದ ಕಾರ್ಯ ಮಾಡುತ್ತಾರೋ, ಅಂದರೆ ಸಮುದಾಯ -ಕುಟುಂಬ ಮೊದಲಾದ ಉದಾಹರಣೆಗಳೊಂದಿಗೆ  ಜೋಡಿಕೆಲಸದ ಉಪಯೋಗಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿ.
- ಮೊದಲ ಕಾರ್ಯಗಳು ಸಂಕ್ಷಿಪ್ತ ಮತ್ತು ಸ್ಪಷ್ಟವಾಗಿರಲಿ
- ನಿಮ್ಮ ನಿರೀಕ್ಷೆಯಂತೆ ವಿದ್ಯಾರ್ಥಿಗಳು ಜೋಡಿಗಳಲ್ಲಿ ಕೆಲಸ ಮಾಡುವುದನ್ನು ಪರಿವೀಕ್ಷಿಸಿ.
- ಜೋಡಿಗಳಲ್ಲಿ ಅವರ ಪಾತ್ರ ಪಾತ್ರ ಅಥವಾ ಜವಾಬ್ದಾರಿ ಸ್ಪಷ್ಟವಾಗಿರಲಿ. ಕಥೆಯಲ್ಲಿನ ಎರಡು ಪಾತ್ರಗಳು ಅಥವಾ ಸರಳವಾಗಿ '1' ಮತ್ತು '2' ಅಥವಾ 'A' ಮತ್ತು 'B' ಎಂದು ಹೇಳಿ ಅವರ ಜವಾಬ್ದಾರಿಯ ಕುರಿತು ವಿವರಣೆ ನೀಡಬಹುದು. ಇದನ್ನು ಅವರು ಜೋಡಿಯಲ್ಲಿ ಕುಳಿತುಕೊಳ್ಳುವ ಮುಂಚೆಯೇ ಮಾಡುವುದು ಒಳ್ಳೆಯದು.
- ವಿದ್ಯಾರ್ಥಿಗಳು ಪರಸ್ಪರ ಎದುರು - ಬದುರು ಕುಳಿತುಕೊಳ್ಳುವಂತೆ ನೋಡಿಕೊಳ್ಳಿ. ಜೋಡಿ ಕೆಲಸ ಮಾಡಲು ವಿದ್ಯಾರ್ಥಿಗಳಿಗೆ ಪ್ರತಿ ಕಾರ್ಯಕ್ಕೆ (task) ಎಷ್ಟು ಸಮಯ ಎಂದು ಹೇಳಿ, ಆಗಾಗ್ಗೆ ನೆನಪಿಸಬೇಕು. ಕಾರ್ಯದಲ್ಲಿ ನಿರತರಾಗಿ ಮುಂದುವರಿಯುತ್ತಿರುವ ಜೋಡಿಗಳನ್ನು ಪ್ರಶಂಸಿಸಿ. ವಿದ್ಯಾರ್ಥಿಗಳು ತಾವೇ ಕುಳಿತು ಅರ್ಥ ಮಾಡಿಕೊಂಡು ಪರಿಹಾರ ಕಂಡುಕೊಳ್ಳಲು ಸಮಯ ಕೊಡಿ. ವಿದ್ಯಾರ್ಥಿಗಳು ಆಲೋಚಿಸಿ, ತಾವು ಏನು ಮಾಡಬಲ್ಲರೆಂದು ತೋರಿಸುವ ಮುನ್ನವೇ, ಬಹುಬೇಗ ಕಾರ್ಯದಲ್ಲಿ ತೊಡಗಿಕೊಂಡು ಬಿಡಬೇಕೆಂದು ನಮಗೆ ಅನ್ನಿಸಬಹುದು. ಪ್ರತಿಯೊಬ್ಬರೂ ಮಾತನಾಡಿ, ಕಾರ್ಯ ನಿರ್ವಹಿಸುವಂತಹ ವಾತಾವರಣವನ್ನು  ಬಹುತೇಕ ವಿದ್ಯಾರ್ಥಿಗಳು ಇಷ್ಟಪಡುತ್ತಾರೆ. ನೀವು ತರಗತಿ ವೀಕ್ಷಿಸುತ್ತಾ, ಆಲಿಸುತ್ತಾ ತಿರುಗಾಡುತ್ತಿದ್ದಂತೆ, ಪರಸ್ಪರ ಆರಾಮವಾಗಿ ಹೊಂದಿಕೊಳ್ಳುವವರ, ಹೊಂದಿಕೊಳ್ಳದೆ ಒಂಟಿಯಾಗಿರುವವರ, ಸಾಮಾನ್ಯ ತಪ್ಪುಗಳ, ಒಳ್ಳೆಯ ವಿಚಾರಗಳ ಮತ್ತು ಸಾರಾಂಶದ ಟಿಪ್ಪಣಿಯನ್ನು ಮಾಡಿಕೊಳ್ಳಿ.

ಕೊನೆಯಲ್ಲಿ, ವಿದ್ಯಾರ್ಥಿಗಳ ಕಾರ್ಯಕ್ಕೆ ಸಂಪರ್ಕ ಕಲ್ಪಿಸುವ ಪಾತ್ರ ನಿಮ್ಮದು. ಕೆಲವು ಜೋಡಿಗಳಿಂದ ಅವರ ಕಾರ್ಯ ಪ್ರದರ್ಶನ ಮಾಡಿಸಬಹುದು ಅಥವಾ ನೀವೇ ಅದನ್ನು ಸಾರಾಂಶೀಕರಣ ಮಾಡಬಹುದು. ಜೊತೆಯಲ್ಲಿ ಕಾರ್ಯ ನಿರ್ವಹಿಸುವಾಗ ವಿದ್ಯಾರ್ಥಿಗಳು ಸಾಧನೆಯ ಭಾವವನ್ನು ಅನುಭವಿಸಲು ಇಚ್ಛಿಸುತ್ತಾರೆ. ಪ್ರತಿ ಜೋಡಿಯೂ ನಿಮಗೆ ವರದಿ ಒಪ್ಪಿಸುವ ಅಗತ್ಯವಿಲ್ಲ . ಇದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಆದರೆ ನಿಮ್ಮ ವೀಕ್ಷಣೆಯ ಆಧಾರದ ಮೇಲೆ ಬೇರೆಯವರ ಕಲಿಕೆಗೂ ಸಹಾಯವಾಗುವಂತೆ ಧನಾತ್ಮಕ ಕೊಡುಗೆ ನೀಡುವ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ. ಹಿಂಜರಿಕೆ ಸ್ವಭಾವದ ವಿದ್ಯಾರ್ಥಿಗಳಿಗೆ ತಮ್ಮ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಲು ಇದು ಒಂದು ಅವಕಾಶವಾಗಬಹುದು.

ನೀವು ವಿದ್ಯಾರ್ಥಿಗಳಿಗೆ ಒಂದು ಸಮಸ್ಯೆಯನ್ನು ಪರಿಹರಿಸಲು ಕೊಟ್ಟಿದ್ದರೆ, ನೀವು ಮಾದರಿ ಉತ್ತರವನ್ನು ಕೊಟ್ಟು, ತಮ್ಮ ಉತ್ತರಗಳನ್ನು ಜೋಡಿಯಲ್ಲಿ ಚರ್ಚಿಸಿ, ಉತ್ತಮಪಡಿಸಿಕೊಳ್ಳುವಂತೆ ಹೇಳಬಹುದು. ಇದು ತಮ್ಮ ಕಲಿಕೆಯ ಕುರಿತು ಆಲೋಚನೆ ಮಾಡುವಂತೆ ಹಾಗೂ ತಮ್ಮ ತಪ್ಪುಗಳಿಂದ ಕಲಿಯುವಂತೆ ಮಾಡುತ್ತದೆ.

ಜೋಡಿ ಕೆಲಸವನ್ನು ಸಂಘಟಿಸುವುದು ನಿಮಗೆ ಹೊಸದಾಗಿದ್ದಲ್ಲಿ, ಕಾರ್ಯ, ಸಮಯ ಮತ್ತು ಜೋಡಿಗಳಿಗೆ ಸಂಬಂಧಿಸಿದಂತೆ ಬದಲಾವಣೆ ಮಾಡಿಕೊಳ್ಳಬೇಕಾಗಿದ್ದಲ್ಲಿ, ಟಿಪ್ಪಣಿ ಮಾಡಿಕೊಳ್ಳುವುದು ಮುಖ್ಯ. ಏಕೆಂದರೆ, ಹೀಗೆ ನೀವು ಕಲಿತು, ನಿಮ್ಮ ಬೋಧನೆಯನ್ನು ಉತ್ತಮಪಡಿಸಿಕೊಳ್ಳುತ್ತೀರಿ. ಯಶಸ್ವಿ ಜೋಡಿ ಕೆಲಸಗಳನ್ನು ಸಂಘಟಿಸುವುದಕ್ಕೆ ಸ್ಪಷ್ಟ ಸೂಚನೆಗಳು, ಉತ್ತಮ ಸಮಯ ನಿರ್ವಹಣೆ ಹಾಗೂ ಸಂಕ್ಷಿಪ್ತ ಸಾರಾಂಶೀಕರಣ ಬಹಳ ಅಗತ್ಯ. ಇವುಗಳಿಗೆ ಅಭ್ಯಾಸ ಬೇಕಾಗುತ್ತದೆ.

## ಹೆಚ್ಚುವರಿ ಸಂಪನ್ಮೂಲಗಳು

- 'Book-talk' by Pie Corbett: http://webfronter.com/lewisham/primarycommunity/menu1/Writing/Talk_for_Writing/Booktalk_by_Pie_Corbett
- Booktrust is an independent UK reading and writing charity. It provides resources and tools to support professionals in helping both children and adults to develop in their reading and writing journey: http://www.booktrust.org.uk/
- NCERT books for children: http://www.ncert.nic.in/publication/children_books/children_books.html
- Pratham Books: http://www.prathambooks.org/
- 'Children's literature from India and the Indian diaspora', a post on Pratham Books' blog: http://blog.prathambooks.org/2010/10/childrens-literature-from-india-and.html
- Dasgupta, A. (1995) *Telling Tales: Children's Literature in India*. London: Taylor and Francis.
- A useful article about children's literature in India: http://isahitya.com/index.php/77-special-articles/269
- 'How to teach … reading for pleasure', from a UK website that contains some useful ideas and further links: http://www.theguardian.com/teacher-network/teacher-blog/2013/dec/16/reading-for-pleasure-reluctant-readers-schools-resources
- N'Namdi, K.A. (2005) *Guide to Teaching Reading at the Primary School Level*. Paris: UNESCO.
- *New Approaches to Literacy Learning* by V. Elaine Carter: http://unesdoc.unesco.org/images/0012/001257/125767eb.pdf

## ಪರಾಮರ್ಶನ ಮತ್ತು ಗ್ರಂಥಿಸೂಚಿ

Clark, C. and De Zoysa, S. (2011) *Mapping the Interrelationships of Reading Enjoyment, Attitudes, Behaviour and Attainment: An Exploratory Investigation*. London: National Literacy Trust.

Clark, C. and Poulton, L. (2011) *Is Four the Magic Number? Number of Books Read in a Month and Young People's Wider Reading Behaviour*. London: National Literacy Trust.

Clark, C. and Rumbold, K. (2006) *Reading for Pleasure: A Research Overview*. London: The National Literacy Trust.

Education World (undated) 'Book review form' (online). Available from: http://www.educationworld.com/a_lesson/template/book-review.shtml (accessed 23 October 2014).

*Times of India* (2014) 'Giant wheel a monumental treat' (online), 3 October. Available from: http://timesofindia.indiatimes.com/city/delhi/Giant-wheel-a-monumental-treat/articleshow/44155864.cms (accessed 23 October 2014).

ಕರ್ನಾಟಕ ಪಠ್ಯಪುಸ್ತಕ ಸಂಘದಿಂದ ಪ್ರಕಟಿತ, ' ಸಿರಿಕನ್ನಡ' (2013) ಎಂಟನೇ ತರಗತಿ ಪ್ರಥಮಭಾಷಾ ಕನ್ನಡ ಪಠ್ಯಪುಸ್ತಕ.

ಪ್ರಜಾವಾಣಿ, ಕರ್ನಾಟಕ ದರ್ಶನದಲ್ಲಿನ 'ನಮ್ಮ ಜಾಂಬೋರೇಟ್' (27.1.2015). ಲೇಖನ; ಲೇಖಕರು ಎನ್ ಎಂ ನಟರಾಜ ನಾಗಸಂದ್ರ.

## Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.